ಓಎಸ್ ನಂ. 248/2006 ಡಿಡಬ್ಲ್ಯೂ-1

ದಿನಾಂಕಃ 15.10.2015ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಆರ್‌ಆರ್‌ಎನ್ ವಕೀಲರಿಂದ ಃ

ನಾನು 1984 ರಿಂದ 90ರತನಕ 1ನೇ ಪ್ರತಿವಾದಿ ಸಂಸ್ಥೆಯ ಅಧ್ಯಕ್ಷನಾಗಿದ್ದೆ. ಆಮೇಲೆ 3 ವರ್ಷ ಕಳೆದ ಮೇಲೆ ಪುನಃ ಒಂದೆರಡು ವರ್ಷಗಳ ಮಟ್ಟಿಗೆ ಅಧ್ಯಕ್ಷನಾಗಿದ್ದೆ. 2008ರಲ್ಲಿ ಕೊನೆಯ ಬಾರಿಗೆ ಅಧ್ಯಕ್ಷನಾಗಿ ಮತ್ತು ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದೆ. ಆ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನಾನು ಮೂರು ಬಾರಿ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದೆ. ಕ್ಯಾತಮಾರನಹಳ್ಳಿಯ ಯಾವುದೇ ಸರ್ವೆ ನಂಬರಿನಲ್ಲಿ ನಮ್ಮ ಲೇಔಟ್ ಆಗಿಲ್ಲ. ಕ್ಯಾತಮಾರನಹಳ್ಳಿ ಮತ್ತು ಯರಗನಹಳ್ಳಿ ಗ್ರಾಮಗಳು ಅಕ್ಕಪಕ್ಕದಲ್ಲಿವೆ. ನನ್ನ ವಿದ್ಯಾರ್ಹತೆ ಎಂಎ., ಬಿಇಡಿ. ಯರಗನಹಳ್ಳಿ ಗ್ರಾಮದ ಸರ್ವೆ ನಂ. 54 ರಿಂದ 61 ಮತ್ತು 67 ಮತ್ತು 68ನ್ನು ಲೇಔಟ್ ಮಾಡಿದಾಗ ನಾನು ಅಧ್ಯಕ್ಷನಾಗಿದ್ದೆ. ಆಗ ಗ್ರಾಮನಕಾಶೆ ಹೇಗೆ ಬರುತ್ತದೆ ಮತ್ತು ಲೇಔಟ್ ಹೇಗೆ ಬರುತ್ತದೆ ಎನ್ನುವ ಬಗ್ಗೆ ತಿಳಿದುಕೊಂಡಿದ್ದೆ. ರಾಜಕುಮಾರ್ ರಸ್ತೆಯಿಂದ ಪಶ್ಚಿಮಕ್ಕೆ ವಿವಾದಿತ ಭೂಮಿ ಇರುತ್ತದೆ. ರಾಜಕುಮಾರ್ ರಸ್ತೆಯಿಂದ ಪಶ್ಚಿಮಕ್ಕೆ ನಮ್ಮ ಲೇಔಟ್ ಇಲ್ಲ ಎಂದರೆ ಸರಿಯಲ್ಲ. ರಾಜಕುಮಾರ್ ರಸ್ತೆಯಿಂದ ಪಶ್ಚಿಮಕ್ಕೆ ಸುಮಾರು 16 ರಿಂದ 17 ಸೈಟ್‌ಗಳು ಇರಬಹುದು. ಯರಗನಹಳ್ಳಿಯ ವಿಲೇಜ್ ಮ್ಯಾಪ್‌ನ್ನು ನೋಡಿರುತ್ತೇನೆ. ಯರಗನಹಳ್ಳಿ ಗ್ರಾಮದ ಸರ್ವೆ ನಂ. 54 ಮತ್ತು 56 ಆ ಗ್ರಾಮದ ಪಶ್ಚಿಮಗಡಿಯಲ್ಲಿ ಇರುತ್ತವೆ. ನಿಪಿ-6ನ್ನು ನೋಡಿದ್ದು ಅದು ಸರಿಯಿರುತ್ತದೆ. 54, 56ರ ಪಶ್ಚಿಮದ ಗಡಿರೇಖೆ ನೇರವಾಗಿ ಇದೆ ಎಂದರೆ ಸರಿ. ಸರ್ವೆ ನಂ. 53, 54 ಮತ್ತು

56 ರ ಪಶ್ಚಿಮದ ಗಡಿ ನೇರವಾಗಿ ಇದೆ. ಸದರಿ ಗಡಿರೇಖೆ ದಕ್ಷಿಣಕ್ಕೆ ಬರುತ್ತಾ ಸ್ವಲ್ಪಮಟ್ಟಿಗೆ ಪೂರ್ವದ ಕಡೆಗೆ ಇರುತ್ತದೆ. ವಾದಿ ದಾವೆ ಹಾಕಿರುವುದು ಸರ್ವೆ ನಂ. 53,



54ಕ್ಕೆ ಸಂಬಂಧಿಸಿರುತ್ತದೆ. ವಾದಿ ಕ್ಯಾತಮಾರನಹಳ್ಳಿಯ ಸರ್ವೆ ನಂ. 176ಕ್ಕೆ ಹಾಕಿದ್ದು ಯರಗನಹಳ್ಳಿ ಗ್ರಾಮದ ಸರ್ವೆ ನಂಬರ್‌ಗೆ ಹಾಕಿಲ್ಲ ಎಂದರೆ ಸರಿ. ನಿಪಿ-6ರಲ್ಲಿ ಕಾಣಿಸಿದ ಸನ್ನಿವೇಶಕ್ಕೂ ನಿಪಿ-4ರಲ್ಲಿ ಕಾಣಿಸಿದ ಸನ್ನಿವೇಶಕ್ಕೂ ತಾಳೆಯೂಗುತ್ತಿಲ್ಲ ಎಂದರೆ ಸರಿ. ಸೂಪರ್‌ಇಂಪೋಸ್ಡ್ ಲೇಔಟ್‌ಪ್ಲಾನ್ ಕೊಟ್ಟ ಬಗ್ಗೆ ನನಗೆ ಜ್ಞಾಪಕವಿಲ್ಲ. ನಿಪಿ-4ರಲ್ಲಿ ಯಾವ ಸೈಟು ಯಾವ ಸರ್ವೆ ನಂಬರ್‌ನಲ್ಲಿ ಬರುತ್ತದೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ನಿಪಿ-4ರಲ್ಲಿ ಎಡಬದಿಗೆ 80 ಅಡಿ ಅಗಲದ ರಸ್ತೆ ಎಂದು ತೋರಿಸಿದ ರಸ್ತೆಯೇ ರಾಜಕುಮಾರ್ ರಸ್ತೆ ಆಗಿರುತ್ತದೆ. ಗ್ರಾಮದ ಗಡಿಯು ರಾಜಕುಮಾರ್ ರಸ್ತೆಯ ಪೂರ್ವ ಭಾಗದಲ್ಲಿದೆ ಎಂದರೆ ಸರಿಯಲ್ಲ. ನಿಪಿ-4ರಲ್ಲಿ ಕಾಣಿಸಿದ ವಿಲೇಜ್‌ಮ್ಯಾಪ್‌ಗೂ ಮತ್ತು ಅದರಲ್ಲಿಯೇ ತೋರಿಸಿದ ಸೈಟ್‌ಲೇಔಟ್‌ಗೂ ಒಂದಕ್ಕೊಂದು ತಾಳೆಯಾಗುತ್ತಿಲ್ಲ ಎಂದರೆ ಸರಿಯಲ್ಲ. ರಾಜಕುಮಾರ್ ರಸ್ತೆಯಿಂದ ಪಶ್ಚಿಮಕ್ಕೆ ನಮ್ಮ ಲೇಔಟ್ ಇದೆ ಎಂದು ಹೇಳುತ್ತಿರುವುದು ವಾಸ್ತವವಾಗಿ ವಾದಿಯ ದಾವಾಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ಓಎಸ್ ನಂ. 117/91ರಲ್ಲಿ ಈ ದಾವೆಯ ವಾದಿ ಪಕ್ಷಗಾರರಲ್ಲ ಎಂದರೆ ನನಗೆ ಜ್ಞಾಪಕವಿಲ್ಲ. ಸರ್ವೆ ನಂ. 176 ಮತ್ತು ಸರ್ವೆ ನಂ. 54 ಮತ್ತು 56ರ ಗಡಿ ಗುರುತು ನಿಖರವಾಗಿ ಗುರುತಿಸಲು ಸರ್ವೇಯರ್‌ನ್ನು ನೇಮಕಗೊಳಿಸಲು ನಮ್ಮ ಆಕ್ಷೇಪವಿಲ್ಲ. ಓಎಸ್ ನಂ. 117/91ರಲ್ಲಿ ಸಲ್ಲಿಸಿದ ಕಮಿಷನರ್ ವರದಿ ನಾವು ವಶೀಲಿ ಮಾಡಿ ಬರೆಸಿಕೊಂಡ ವರದಿ ಎಂದರೆ ಸರಿಯಲ್ಲ. ಆ ದಾವೆ ನಡೆಯುವಾಗ ನಾನು ಅಧ್ಯಕ್ಷನಾಗಿರಲಿಲ್ಲ. ಆ ದಾವೆಯಲ್ಲಿ ಕಮಿಷನರ್‌ರ ಸಾಕ್ಷಿ ವಿಚಾರಣೆ ನಡೆದಿದೆಯೋ

ಎನ್ನುವುದು ನನಗೆ ಗೊತ್ತಿಲ್ಲ. ಆ ದಾವೆ ವಜಾ ಆಗಿದೆ ಎನ್ನುವ ವಿಚಾರ ತಿಳಿದುಬಂತು. ಆ ದಾವೆಯ ವಾದಿ ವೈಯುಕ್ತಿಕ ಪರಿಚಯ ಇಲ್ಲ ಆದರೆ ಕೆಲವೊಮ್ಮೆ ಮಾತನಾಡಿಸಿರುತ್ತಾರೆ. ಅವರು ಮದ್ಯಪಾನಿಯಾಗಿದ್ದರು ಎನ್ನುವುದು ಗೊತ್ತಿಲ್ಲ. ಸದರಿ ಲೇಔಟ್‌ನ್ನು ಪಶ್ಚಿಮಕ್ಕೆ ಒತ್ತುವರಿ ಮಾಡಿಕೊಂಡೆ ತೋರಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಯರಗನಹಳ್ಳಿ ಗ್ರಾಮದ ಸರ್ವೆ ನಂ. 53 ಮತ್ತು 51ರಲ್ಲಿ ನಮ್ಮ ಲೇಔಟ್ ಇರುವುದಿಲ್ಲ. ಸರ್ವೆ ನಂ. 54, 56ರ ಪಶ್ಚಿಮಕ್ಕೆ ಕ್ಯಾತಮಾರನಹಳ್ಳಿಯ ಯಾವ ಯಾವ ಸರ್ವೆ ನಂಬರ್ ಬರುತ್ತದೆ ಎನ್ನುವುದು ಗೊತ್ತಿಲ್ಲ. ನಾವು ಲೇಔಟ್ ಮಾಡಿದ್ದು ತಪ್ಪಾಗಿದೆ ಮತ್ತು ವಾದಿಯ ದಾವಾಸ್ವತ್ತನ್ನು ಒತ್ತುವರಿ ಮಾಡಿಕೊಂಡಿದ್ದು ಕೂಡ ಗೊತ್ತು ಮತ್ತು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

ಲಘು ವ್ಯವಹಾರಗಳ ಮತ್ತು ಸಿವಿಲ್
ನ್ಯಾಯಾಧೀಶರು (ಹಿ.ವಿ), ಮೈಸೂರು.